THE NEW SUNDAY EXPRESS

SUNDAY 05.06.2022

# Manipal Arogya Card launched

EXPRESS NEWS SERVICE @ Udupi

UDUPI MLA K Raghupathi Bhat launched the Manipal Arogya Card-2022 of Kasturba Hospital on Saturday and appreciated the move to provide treatment at a discounted rate. Recalling hospital management readily agreeing to dedicate its sister concern, Dr TMA Pai Hospital in Udupi, to treat Covid patients exclusively during the pandemic waves, Bhat said a lot of Covid-19 patients were benefited by the hospital's decision. Speaking about the Manipal Arogya Card, the MLA said the card was introduced by the hospital with an aim to make quality healthcare treatment affordable to the public by providing discounts.

As per this scheme of Manipal Arogya Card, a cardholder can avail benefits of medical and dental services across Manipal hospitals at Manipal, Karkala, Mangaluru, Goa and Kateel. The card holder can avail a discount of 50 per cent on con-



sultation fee for both specialist and super specialist doctors, 30 per cent discount on diagnostics and laboratory investigations, 20 per cent discount on radiology investigation, OPD procedures and diabetic foot care, Rs 100 discount on dialysis, up to 12 per cent discount on the medicines purchased from the hospital pharmacy and 25 per cent concession on inpatient bill excluding consumables and packages in general ward. The Manipal Arogya Card will have one year and two-year scheme options.

Dr M D Venkatesh, Vice-chancellor, MAHE Manipal, also spoke.

# ಮಣಿಪಾಲ ಆರೋಗ್ಯ ಕಾರ್ಡ್ ಬಡವರಿಗೆ ವರದಾನ: ರಘುಪತಿ ಭಟ್

## ಆರೋಗ್ಯ ಕಾರ್ಡ್ ಯೋಜನೆ ಉದ್ಘಾಟನೆ

KP




ಆರೋಗ್ಯ ಕಾರ್ಡ್ ಯೋಜನೆ ಉದ್ಘಾಟಿಸಿ, ಮೊದಲ ಕಾರ್ಡನ್ನು ವಿತರಿಸಲಾಯಿತು.

### 22 ವರ್ಷಗಳಲ್ಲಿ 3.66 ಲಕ್ಷ

22 ವರ್ಷಗಳ ಹಿಂದೆ ಮಣಿಪಾಲ ಆರೋಗ್ಯ ಕಾರ್ಡ್ ಎಂಬ ವಿವಿಧ ವೈದ್ಯಕೀಯ ಸೇವೆಗಳಿಗೆ ರಿಯಾಯಿತಿ ನೀಡುವ ಯೋಜನೆ ಆರಂಭವಾಯಿತು. ಆ ವರ್ಷ ಕೇವಲ 24 ಸಾವಿರ ಮಂದಿ ಮಾತ್ರ ದಾಖಲಾಗಿಆದ್ದರು. 2010ರಲ್ಲಿ 84 ಸಾವಿರ, 2021ರಲ್ಲಿ 3.64 ಲಕ್ಷ ಮಂದಿ ಕಾರ್ಡ್‌ನಿಂದ ಕೋಟ್ಯಂತರ ರು. ಪ್ರಯೋಜನ ಪಡೆದಿದ್ದಾರೆ.

• **ಕನ್ನಡಪ್ರಭ ವಾರ್ತೆ** ಮಣಿಪಾಲ

ಆರ್ಥಿಕ ಸಮಸ್ಯೆಯಿಂದ ಬಳಲುತ್ತಿರುವ ಬಡವರಿಗೆಆರೋಗ್ಯ ಸಮಸ್ಯೆ ಉಂಟಾದಾಗ, ಅವರ ಆರ್ಥಿಕ ಸಮಸ್ಯೆ ಇನ್ನಷ್ಟು ಬಿಗಡಾಯಿಸುತ್ತದೆ. ಆದ್ದರಿಂದ ಖಾಸಗಿ ಆಸ್ಪತ್ರೆಗಳು ಬಡವರ ಸಮಸ್ಯೆಗಳಿಗೆ ಸ್ಪಂದಿಸಬೇಕು. ಈ ನಿಟ್ಟಿನಲ್ಲಿ ಮಣಪಾಲದ ಮಾಹೆ ವಿವಿ ಮತ್ತು ಕೆಎಂಸಿ ಆಸ್ಪತ್ರೆಯ ಆರೋಗ್ಯ ಕಾರ್ಡ್ ಬಡವರಿಗೆ ವರದಾನವಾಗಿದೆ ಎಂದು ಉಡುಪಿ ಶಾಸಕ ಕೆ.ರಘುಪತಿ ಭಟ್ ಹೇಳಿದರು.

ಅವರು ಶನಿವಾರ ಆಸ್ಪತ್ರೆಯಲ್ಲಿ 2022ನೇ ಸಾಲಿನ ಆರೋಗ್ಯ ಕಾರ್ಡ್ ಯೋಜನೆ ಉದ್ಘಾಟಿಸಿ, ಮೊದಲ ಕಾರ್ಡನ್ನು ವಿತರಿಸಿ ಮಾತನಾಡಿದರು.

ಉಡುಪಿಯಲ್ಲಿ ಪಿಪಿಪಿ ಮಾದರಿಯಲ್ಲಿ ವೈದ್ಯಕೀಯ ಕಾಲೇಜು ಆರಂಭಿಸುವುದಕ್ಕೆ ಸರ್ಕಾರ ಸಿದ್ಧವಿದೆ. ಆದರೆ ಇದಕ್ಕೆ ಕೆಲವರು ವಿರೋಧವನ್ನೂ ವ್ಯಕ್ತಪಡಿಸುತ್ತಿದ್ದಾರೆ. ಆದರೆ ಈ ಕಾಲೇಜನ್ನು ವೈದ್ಯಕೀಯ ಶಿಕ್ಷಣದ ಉದ್ದೇಶದಿಂದ ಅಲ್ಲ, ಜಿಲ್ಲೆಯ ಜನರ ಆರೋಗ್ಯ ಸೇವೆಯನ್ನು ಗಮನದಲ್ಲಿಟ್ಟು ಆರಂಭಿಸಲಾಗುತ್ತಿದೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಮಾಹೆ ವಿವಿ ಸಹಉಪಕುಲಾಧಿಪತಿ ಡಾ. ಎಚ್.ಎಸ್. ಬಲ್ಲಾಳ್ ಮಾತನಾಡಿ, ಮಣಿಪಾಲ ಆರೋಗ್ಯ ಕಾರ್ಡ್ 3 ಲಕ್ಷಕ್ಕೂ ಅಧಿಕ ಮಂದಿಗೆ ತಲುಪಿದೆ ಎಂದರೇ ಅಷ್ಟು ಮಂದಿ ಬಡವರಿಗೆ ರಿಯಾಯತಿ ದರದಲ್ಲಿ ಆರೋಗ್ಯ ಸೇವೆ ಸಿಕ್ಕಿದೆ ಎಂದರ್ಥ ಎಂದು ಹೇಳಿದರು.

> **ಮಣಿಪಾಲ ಆರೋಗ್ಯ ಕಾರ್ಡ್ 3 ಲಕ್ಷಕ್ಕೂ ಅಧಿಕ ಮಂದಿಗೆ ತಲುಪಿದೆ ಎಂದರೇ ಅಷ್ಟು ಮಂದಿ ಬಡವರಿಗೆ ರಿಯಾಯತಿ ದರದಲ್ಲಿ ಆರೋಗ್ಯ ಸೇವೆ ಸಿಕ್ಕಿದೆ ಎಂದರ್ಥ**
>
> • **ಡಾ. ಎಚ್.ಎಸ್. ಬಲ್ಲಾಳ್** ಮಾಹೆ ವಿವಿ ಸಹಉಪಕುಲಾಧಿಪತಿ

ಮಾಹೆ ಮಣಿಪಾಲ್ ಸಹಉಪಕುಲಪತಿ ಡಾ.ಪಿ.ಎಲ್.ಎನ್.ಜಿ.ರಾವ್, ಮಾಹೆ ಮಂಗಳೂರು ಕ್ಯಾಂಪಸ್ ಸಹಉಪಕುಲಪತಿ ಡಾ. ದಿಲೀಪ್ ಜಿ. ನಾಯ್ಕ್, ಮಣಿಪಾಲ್ ಹೆಲ್ತ್ ಸಾಯನ್ಸ್ ಸಹಉಪಕುಲಪತಿ ಡಾ. ವೆಂಕಟ್ರಾಯ ಎಂ.ಪ್ರಭು ಉಪಸ್ಥಿತರಿದ್ದರು.

ಮಣಿಪಾಲ ಕೆಎಂಸಿ ಡೀನ್ ಡಾ.ಶರತ್ ರಾವ್ ಸ್ವಾಗತಿಸಿದರು. ಕೆಎಂಸಿ ಮಂಗಳೂರು ಡೀನ್ ಡಾ. ಬಿ. ಉನ್ನಿಕೃಷ್ಣನ್ ವಂದಿಸಿದರು.

ವಾರ್ತಾ ಭಾರತಿ

# ಮೆಡಿಕಲ್ ಕಾಲೇಜು ಸ್ಥಾಪನೆ ಬಗ್ಗೆ ಚರ್ಚೆ ಅಗತ್ಯ: ರಘುಪತಿ ಭಟ್

ಮಣಿಪಾಲ್ ಆರೋಗ್ಯ ಕಾರ್ಡ್ ನೋಂದಣಿಗೆ ಚಾಲನೆ




ಮಣಿಪಾಲ, ಜೂ.4: ಜಿಲ್ಲೆಯಲ್ಲಿ ಪಿಪಿಪಿ ಮಾದರಿ ಬದಲು ಸರಕಾರಿ ಮೆಡಿಕಲ್ ಕಾಲೇಜು ಸ್ಥಾಪನೆಗೆ ಒತ್ತಾಯಗಳು ಕೇಳಿಬರುತ್ತಿವೆ. ಆದರೆ ರಾಜ್ಯದ ಎರಡು ಮೂರು ಸರಕಾರಿ ಕಾಲೇಜುಗಳ ಅವ್ಯವಸ್ಥೆ, ಅವ್ಯವಹಾರದ ಬಗ್ಗೆ ನಾವು ಸಾಕಷ್ಟು ತಿಳಿದುಕೊಂಡಿದ್ದೇವೆ. ಆದುದರಿಂದ ಖಾಸಗಿ ಸಹಭಾಗಿತ್ವದಲ್ಲಿ ಕಾಲೇಜು ಸ್ಥಾಪಿಸಲು ಮುಂದಾಗಿದ್ದೇವೆ ಎಂದು ಶಾಸಕ ಕೆ.ರಘುಪತಿ ಭಟ್ ಹೇಳಿದ್ದಾರೆ.

ಮಣಿಪಾಲ ಕೆಎಂಸಿಯ ಟಿ.ಎಂ.ಎ.ಪೈ ಹಾಲ್‌ನಲ್ಲಿ ಶನಿವಾರ ನಡೆದ ಕಾರ್ಯಕ್ರಮದಲ್ಲಿ ಫಲಾನುಭವಿಗಳಿಗೆ ಪ್ರಥಮ ಕಾರ್ಡ್ ವಿತರಿಸುವ ಮೂಲಕ 2022ನೇ ಸಾಲಿನ ಮಣಿಪಾಲ್ ಆರೋಗ್ಯ ಕಾರ್ಡ್ ನೋಂದಣಿಗೆ ಚಾಲನೆ ನೀಡಿ ಅವರು ಮಾತನಾಡಿದರು.

ಅಧ್ಯಕ್ಷತೆ ವಹಿಸಿದ್ದ ಮಣಿಪಾಲ ಮಾಹೆ ಸಹ ಕುಲಾಧಿಪತಿ ಡಾ.ಎಚ್.ಎಸ್.ಬಲ್ಲಾಲ್ ಮಾತನಾಡಿ, ವರ್ಷದಿಂದ ವರ್ಷಕ್ಕೆ ಆರೋಗ್ಯ ಕಾರ್ಡ್‌ಗೆ ಸದಸ್ಯರ ನೋಂದಾವಣೆ ಹೆಚ್ಚುತ್ತಿದೆ. ಕಾರ್ಡ್ ಖರೀದಿಸಲು ಹೂಡಿಕೆ ಮಾಡಿದ ಹಣವನ್ನು ಕೇವಲ ಎರಡು ಅಥವಾ ಮೂರು ಸಲದ ಬಳಕೆಗಳಲ್ಲಿ ರಿಯಾಯಿತಿ ರೂಪದಲ್ಲಿ ಹಿಂದೆ ಪಡೆಯಬಹುದು ಎಂದು ಹೇಳಿದರು.

ಮಾಹೆ ಉಪಕುಲಪತಿ ಲೆಫ್ಟಿನೆಂಟ್ ಜನರಲ್ ಡಾ.ಎಂ.ಡಿ.ವೆಂಕಟೇಶ್ ಮಾತನಾಡಿದರು.

ಈ ಸಂದರ್ಭ ವೈದ್ಯಕೀಯ ಮತ್ತು ದಂತ ವಿಜ್ಞಾನಗಳ ಸಹ ಕುಲಪತಿ ಡಾ.ಪಿ.ಎಲ್.ಎನ್. ಜಿ.ರಾವ್ ಮತ್ತು ಮಾಹೆ ಮಂಗಳೂರು ಕ್ಯಾಂಪಸ್‌ನ ಸಹ ಉಪಕುಲಪತಿ ಡಾ.ದಿಲೀಪ್ ಜಿ. ನಾಯ್ಕ್ ಮಣಿಪಾಲ ಆರೋಗ್ಯ ಕಾರ್ಡ್ ಪ್ರತಿನಿಧಿಗಳನ್ನು ಸನ್ಮಾನಿಸಿದರು. ಆರೋಗ್ಯ ವಿಜ್ಞಾನದ ಸಹ ಉಪಕುಲಪತಿ ಡಾ.ವೆಂಕಟರಾಯ ಎಂ. ಪ್ರಭು ಮಣಿಪಾಲ ಆರೋಗ್ಯ ಕಾರ್ಡ್‌ನ ಮಾಹಿತಿ ಕರಪತ್ರವನ್ನು ಬಿಡುಗಡೆಗೊಳಿಸಿದರು.

ಮಣಿಪಾಲ ಕೆಎಂಸಿ ಡೀನ್ ಡಾ.ಶರತ್ ಕೆ.ರಾವ್ ಸ್ವಾಗತಿಸಿದರು. ಮಂಗಳೂರು ಕೆಎಂಸಿ ಡೀನ್ ಡಾ.ಬಿ.ಉನ್ನಿಕೃಷ್ಣನ್ ವಂದಿಸಿದರು. ಕೃಷ್ಣ ಪ್ರಸಾದ್ ಕಾರ್ಯಕ್ರಮ ನಿರೂಪಿಸಿದರು.

Mangalore Edition
Jun 5, 2022 Page No.3

VK
ವಿಜಯ ಕರ್ನಾಟಕ
e-paper

# ಮಣಿಪಾಲ್ ಆರೋಗ್ಯ ಕಾರ್ಡ್ ನೋಂದಣಿಗೆ ಚಾಲನೆ

**ವಿಕ ಸುದ್ದಿಲೋಕ** ಉಡುಪಿ

2022 ರ ಸಾಲಿನ ಮಣಿಪಾಲ್ ಆರೋಗ್ಯ ಕಾರ್ಡ್ ನೋಂದಾವಣೆಗೆ ಶನಿವಾರ ಚಾಲನೆ ನೀಡಲಾಯಿತು.

ಸಾರ್ವಜನಿಕರಿಗೆ ಗುಣಮಟ್ಟದ ಆರೋಗ್ಯ ಸೇವೆಯನ್ನು ಕೈಗೆಟಕುವ ದರದಲ್ಲಿ ದೊರಕಿಸಿಕೊಡುವ ಉದ್ದೇಶದಿಂದ ಮಣಿಪಾಲ ಆರೋಗ್ಯ ಕಾರ್ಡ್ ಅನ್ನು ಪ್ರಾರಂಭಿಸಲಾಯಿತು. ಕಾರ್ಡ್‌ದಾರರು ಮಣಿಪಾಲ, ಕಾರ್ಕಳ, ಮಂಗಳೂರು, ಗೋವಾ ಮತ್ತು ಕಟೀಲ್‌ನಲ್ಲಿರುವ ಮಣಿಪಾಲ ಗುಂಪಿನ ಆಸ್ಪತ್ರೆಗಳಲ್ಲಿ ವೈದ್ಯಕೀಯ ಮತ್ತು ದಂತ ಸೇವೆಗಳಲ್ಲಿ ರಿಯಾಯಿತಿ ಪ್ರಯೋಜನ ಪಡೆಯಬಹುದು.

ಶನಿವಾರ ನಡೆದ ಕಾರ್ಯಕ್ರಮದಲ್ಲಿ ಪ್ರಥಮ ಕಾರ್ಡ್ ವಿತರಿಸುವುದರ ಮೂಲಕ ಮಣಿಪಾಲ ಆರೋಗ್ಯ ಕಾರ್ಡ್ 2022ರ ನೋಂದಣಿಗೆ ಶಾಸಕ ಕೆ. ರಘುಪತಿ ಭಟ್ ಚಾಲನೆ ನೀಡಿದರು.

ಮಣಿಪಾಲ್ ಆರೋಗ್ಯ ಕಾರ್ಡ್ ಹೊಂದಿರುವವರಿಗೆ ತಜ್ಞ ಮತ್ತು ವಿಶೇಷ ತಜ್ಞ ವೈದ್ಯರ ಸಮಾಲೋಚನೆ ಶುಲ್ಕದಲ್ಲಿ ಶೇ.50 ರಿಯಾಯಿತಿ (ಒಪಿಡಿ ಮತ್ತು ನಾನ್ ಒಪಿಡಿ ದಿನಗಳಂದು ) ಹೊರ ರೋಗಿ ಪ್ರಯೋಗಾಲಯ ಪರೀಕ್ಷೆ ಶೇ. 30 ರಿಯಾಯಿತಿ, ಹೊರ ರೋಗಿ ರೇಡಿಯಾಲಜಿ ಪರೀಕ್ಷೆಗಳು (ಸಿಟಿ, ಎಂಆರ್‌ಐ, ಅಲ್ಟ್ರಾ ಸೌಂಡ್ ಇತ್ಯಾದಿ), ಶೇ.20 ರಿಯಾಯಿತಿ, ಹೊರರೋಗಿ ವಿಧಾನಗಳಲ್ಲಿ ಮತ್ತು ಮಧುಮೇಹ ಪಾದ ತಪಾಸಣೆಯಲ್ಲಿ ಶೇ. 20 ರಿಯಾಯಿತಿ, ಹೊರರೋಗಿ ಡಯಾಲಿಸಿಸ್ 100, ಔಷಧಾಲಯಗಳಲ್ಲಿ ಶೇ. 12ರ ವರೆಗೆ ರಿಯಾಯಿತಿ, ಸಾಮಾನ್ಯ ವಾರ್ಡ್‌ನಲ್ಲಿ ಒಳರೋಗಿಯಾದಲ್ಲಿ ಉಪಯೋಗವಾಗುವ ವಸ್ತುಗಳನ್ನು ಮತ್ತು ಪ್ಯಾಕೇಜ್‌ಗಳನ್ನು ಹೊರತುಪಡಿಸಿ ಹೊರತುಪಡಿಸಿ ಶೇ. 25 ರಿಯಾಯಿತಿ ದೊರೆಯಲಿದೆ.

ಮಾಹೆ ಮಣಿಪಾಲ ಸಹ ಕುಲಾಧಿಪತಿ ಡಾ. ಎಚ್.ಎಸ್. ಬಳ್ಳಾಲ್ ಅಧ್ಯಕ್ಷತೆ ವಹಿಸಿದ್ದರು. ಮಾಹೆ ಮಣಿಪಾಲದ ಉಪಕುಲಪತಿ ಲೆಫ್ಟಿನೆಂಟ್ ಜನರಲ್ ಡಾ. ಎಂ.ಡಿ. ವೆಂಕಟೇಶ್ ಮಾತನಾಡಿದರು.

ವೈದ್ಯಕೀಯ ಮತ್ತು ದಂತ ವಿಜ್ಞಾನಗಳ ಸಹ ಕುಲಪತಿ ಡಾ. ಪಿ.ಎಲ್.ಎನ್.ಜಿ. ರಾವ್ ಮತ್ತು ಮಾಹೆ ಮಂಗಳೂರು ಕ್ಯಾಂಪಸ್‌ನ ಸಹ ಉಪ ಕುಲಪತಿ ಡಾ. ದಿಲೀಪ್ ಜಿ. ನಾಯ್ಕ್ ಸನ್ಮಾನಿಸಿದರು.

ಸಹ ಉಪಕುಲಪತಿ ಆರೋಗ್ಯ ವಿಜ್ಞಾನ ಡಾ.ವೆಂಕಟರಾಯ ಎಂ. ಪ್ರಭು ಮಣಿಪಾಲ ಆರೋಗ್ಯಕಾರ್ಡ್ 2022ರ ಮಾಹಿತಿ ಕರ ಪತ್ರ ಬಿಡುಗಡೆ ಮಾಡಿದರು.

ಮಣಿಪಾಲ ಕೆಎಂಸಿ ಡೀನ್ ಡಾ. ಶರತ್ ಕೆ. ರಾವ್ ಸ್ವಾಗತಿಸಿ, ಮಂಗಳೂರು ಕೆಎಂಸಿ ಡೀನ್ ಡಾ.ಬಿ. ಉನ್ನಿಕೃಷ್ಣನ್ ವಂದಿಸಿದರು. ಮಣಿಪಾಲ ಮತ್ತು ಮಂಗಳೂರಿನ ಹಿರಿಯ ಆಡಳಿತಾಧಿಕಾರಿ ಉಪಸ್ಥಿತರಿದ್ದರು. ಕೃಷ್ಣ ಪ್ರಸಾದ್ ಕಾರ್ಯಕ್ರಮ ನಿರೂಪಿಸಿದರು.

ಸಾರ್ವಜನಿಕರು ಕಸ್ತೂರ್ಬಾ ಆಸ್ಪತ್ರೆ ಮಣಿಪಾಲ, ಎಲ್ಲ ನೆಟ್‌ವರ್ಕ್ ಆಸ್ಪತ್ರೆಗಳು ಮತ್ತು ಅಧಿಕೃತ ಪ್ರತಿನಿಧಿಗಳಲ್ಲಿ ಮಣಿಪಾಲ ಆರೋಗ್ಯಕಾರ್ಡ್ ಅನ್ನು ನೋಂದಾಯಿಸಿಕೊಳ್ಳಬಹುದು.



ಮಣಿಪಾಲ ಆರೋಗ್ಯ ಕಾರ್ಡ್ 2022ರ ನೋಂದಣಿಗೆ ಶಾಸಕ ಕೆ. ರಘುಪತಿ ಭಟ್ ಚಾಲನೆ ನೀಡಿದರು.

ಒಂದು ವರ್ಷದ ಯೋಜನೆಯಲ್ಲಿ ಕಾರ್ಡ್‌ನ ಸದಸ್ಯತ್ವವು ಒಬ್ಬರಿಗೆ 300 ರೂ., ಕೌಟಂಬಿಕ ಕಾರ್ಡ್ ಅಂದರೆ ಕಾರ್ಡ್‌ದಾರ, ಅವರ ಸಂಗಾತಿ 25 ವರ್ಷದೊಳಗಿನ ಮಕ್ಕಳಿಗೆ 600 ರೂ., ಮತ್ತು ಕುಟುಂಬ ಪ್ಲಸ್ ಯೋಜನೆ ಅಂದರೆ ಕಾರ್ಡ್‌ದಾರ, ಅವರ ಸಂಗಾತಿ, 25 ವರ್ಷದ ಒಳಗಿನ ಮಕ್ಕಳು ಮತ್ತು 4 ಪೋಷಕರು (ತಂದೆ, ತಾಯಿ, ಅತ್ತೆ ಮತ್ತು ಮಾವ) 750 ರೂ., ಎರಡು ವರ್ಷದ ಯೋಜನೆಯಲ್ಲಿ ಒಬ್ಬರಿಗೆ 500 ರೂ., ಕುಟುಂಬಕ್ಕೆ 800 ರೂ. ಮತ್ತು ಕೌಟಂಬಿಕ ಪ್ಲಸ್ ಯೋಜನೆಗೆ 950 ರೂ. ಆಗಿದೆ.

**HOSADIGANTHA**

**05th June 2022**

# ಉಡುಪಿಯಲ್ಲಿ ಪಿಪಿಪಿ ಮಾದರಿ ಕಾಲೇಜ್ ಸ್ಥಾಪನೆಗೆ ಸರಕಾರ ಸಿದ್ಧವಿದೆ: ಶಾಸಕ ಭಟ್

**ಉಡುಪಿ:** ಉಡುಪಿಯಲ್ಲಿ ಪಿಪಿಪಿ ಮಾದರಿಯಲ್ಲಿ ವೈದ್ಯಕೀಯ ಕಾಲೇಜು ಆರಂಭಿಸುವುದಕ್ಕೆ ಸರಕಾರ ಸಿದ್ಧವಿದೆ. ಆದರೇ ಇದಕ್ಕೆ ಕೆಲವರು ವಿರೋಧವನ್ನೂ ವ್ಯಕ್ತಪಡಿಸುತಿದ್ದಾರೆ. ಆದರೇ ಈ ಕಾಲೇಜನ್ನು ವೈದ್ಯಕೀಯ ಶಿಕ್ಷಣದ ಉದ್ದೇಶದಿಂದ ಅಲ್ಲ, ಜಿಲ್ಲೆಯ ಜನರ ಆರೋಗ್ಯ ಸೇವೆಯನ್ನು ಗಮನದಲ್ಲಿಟ್ಟು ಆರಂಭಿಸಲಾಗುತ್ತಿದೆ ಎಂದು ಉಡುಪಿ ಶಾಸಕ ಕೆ. ರಘುಪತಿ ಭಟ್ ಹೇಳಿದರು.

ಅವರು ಶನಿವಾರ ಆಸ್ಪತ್ರೆಯಲ್ಲಿ 2022ನೇ ಸಾಲಿನ ಆರೋಗ್ಯ ಕಾರ್ಡ್ ಯೋಜನೆಯನ್ನು ಉದ್ಘಾಟಿಸಿ, ಮೊದಲ ಕಾರ್ಡನ್ನು ವಿತರಿಸಿ ಮಾತನಾಡಿದರು.

ಆರ್ಥಿಕ ಸಮಸ್ಯೆಯಿಂದ ಬಳಲುತ್ತಿರುವ ಬಡವರಿಗೆ ಆರೋಗ್ಯ ಸಮಸ್ಯೆ ಉಂಟಾದಾಗ, ಅವರ ಆರ್ಥಿಕ ಸಮಸ್ಯೆ ಇನ್ನಷ್ಟು ಬಿಗಡಾಯಿಸುತ್ತದೆ. ಆದ್ದರಿಂದ ಖಾಸಗಿ ಆಸ್ಪತ್ರೆಗಳು ಬಡವರ ಸಮಸ್ಯೆಗಳಿಗೆ ಸ್ಪಂದಿಸಬೇಕು. ಈ ನಿಟ್ಟಿನಲ್ಲಿ




ಮಣಿಪಾಲದ ಮಾಹೆ ವಿವಿ ಮತ್ತು ಕೆಎಂಸಿ ಆಸ್ಪತ್ರೆಯ ಆರೋಗ್ಯ ಕಾರ್ಡ್ ಬಡವರಿಗೆ ವರದಾನವಾಗಿದೆ ಎಂದು ಶ್ಲಾಘಿಸಿದರು.

ಅಧ್ಯಕ್ಷತೆ ವಹಿಸಿದ್ದ ಮಾಹೆ ವಿ.ವಿ. ಸಹಉಪಕುಲಾಧಿಪತಿ ಡಾ.ಎಚ್.ಎಸ್. ಬಲ್ಲಾಳ್, ಮಣಿಪಾಲ ಆರೋಗ್ಯ ಕಾರ್ಡ್ 3 ಲಕ್ಷಕ್ಕೂಅಧಿಕಮಂದಿಗೆತಲುಪಿದೆ. ಬಡವರಿಗೆ ರಿಯಾಯಿತಿ ದರದಲ್ಲಿ ಆರೋಗ್ಯ ಸೇವೆ ಸಿಕ್ಕಿದೆ ಎಂದರ್ಥ ಎಂದರು. ಮಾಹೆ ಮಣಿಪಾಲ್ ಸಹ ಉಪಕುಲಪತಿ ಡಾ.ಪಿ.ಎಲ್.ಎನ್.ಜಿ. ರಾವ್, ಮಾಹೆ ಮಂಗಳೂರು ಕ್ಯಾಂಪಸ್ ಸಹಉಪಕುಲಪತಿ ಡಾ.ದಿಲೀಪ್ ಜಿ.ನಾಯ್ಕ್, ಮಣಿಪಾಲ್ ಹೆಲ್ತ್ ಸಾಯನ್ಸ್ ಸಹಉಪಕುಲಪತಿ ಡಾ.ವೆಂಕಟ್ರಾಯ ಎಂ. ಪ್ರಭು ಉಪಸ್ಥಿತರಿದ್ದರು. ಮಣಿಪಾಲ ಕೆಎಂಸಿ ಡೀನ್ ಡಾ.ಶರತ್ ರಾವ್ ಸ್ವಾಗತಿಸಿದರು. ಕೆಎಂಸಿ ಮಂಗಳೂರು ಡೀನ್ ಡಾ.ಬಿ. ಉನ್ನಿಕೃಷ್ಣನ್ ವಂದಿಸಿದರು.

ಪ್ರಜಾವಾಣಿ

21 ವರ್ಷಗಳಿಂದ ಮಣಿಪಾಲ ಆರೋಗ್ಯ ಕಾರ್ಡ್ ಯೋಜನೆ

# ಮಣಿಪಾಲ ಆರೋಗ್ಯ ಕಾರ್ಡ್ ನೋಂದಣಿ ಆರಂಭ

ಉಡುಪಿ: 2022ನೇ ಸಾಲಿನ ಮಣಿಪಾಲ ಆರೋಗ್ಯ ಕಾರ್ಡ್ ನೋಂದಣಿಗೆ ಶಾಸಕ ಕೆ.ರಘುಪತಿ ಭಟ್ ಶನಿವಾರ ಚಾಲನೆ ನೀಡಿದರು.

ಬಳಿಕ ಮಾತನಾಡಿ, ಕಸ್ತೂರಬಾ ಆಸ್ಪತ್ರೆಯು ರಾಜ್ಯದ ಪ್ರತಿಷ್ಠಿತ ಆಸ್ಪತ್ರೆಗಳಲ್ಲಿ ಒಂದಾಗಿದ್ದು, ಹೊರ ಜಿಲ್ಲೆಗಳಿಂದ ರೋಗಿಗಳು ಚಿಕಿತ್ಸೆಗೆ ಬರುತ್ತಾರೆ. 21 ವರ್ಷಗಳಿಂದ ಮಣಿಪಾಲ ಆರೋಗ್ಯ ಕಾರ್ಡ್ ಯೋಜನೆಯಡಿ ಲಕ್ಷಾಂತರ ರೋಗಿಗಳಿಗೆ ರಿಯಾಯಿತಿ ದರದಲ್ಲಿ ಆರೋಗ್ಯ ಸೇವೆ ದೊರೆತಿದೆ. ಆಸ್ಪತ್ರೆಯ ಕಾರ್ಯ ನಿರಂತರವಾಗಿರಲಿ ಎಂದು ಹಾರೈಸಿದರು.

ಮಾಹೆ ಉಪ ಕುಲಪತಿ ಡಾ.ಎಂ.ಡಿ.ವೆಂಕಟೇಶ್ ಮಾತನಾಡಿ, 2000ದಲ್ಲಿ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯ ಜನರಿಗಾಗಿ ಆರಂಭಿಸಿದ ಮಣಿಪಾಲ ಆರೋಗ್ಯ ಕಾರ್ಡ್ ಯೋಜನೆ ಪ್ರಸ್ತುತ ಉಡುಪಿ, ದಕ್ಷಿಣ ಕನ್ನಡ, ಉತ್ತರ ಕನ್ನಡ, ದಾವಣಗೆರೆ, ಚಿತ್ರದುರ್ಗ, ಶಿವಮೊಗ್ಗ, ಚಿಕ್ಕಮಗಳೂರು, ಬಳ್ಳಾರಿ ಸೇರಿದಂತೆ ಕರಾವಳಿ ಕರ್ನಾಟಕದ ಮತ್ತು ಮಧ್ಯ ಕರ್ನಾಟಕದ 12ಕ್ಕೂ ಹೆಚ್ಚು ಜಿಲ್ಲೆಗಳಿಗೆ ವಿಸ್ತರಣೆ ಆಗಿದೆ ಮೊಬೈಲ್ ಸಂಖ್ಯೆಗೆ ಮಿಸ್ ಕಾಲ್ ಅಥವಾ 'ಆರೋಗ್ಯ' ಎಂದು ವಾಟ್ಸ್ ಆ್ಯಪ್ ಸಂದೇಶ ಕಳುಹಿಸುವ ಮೂಲಕ ಕಾರ್ಡ್‌ನ ಬಗ್ಗೆ ಸಂಪೂರ್ಣ ಮಾಹಿತಿ ಪಡೆಯುವ ಸೌಲಭ್ಯವನ್ನು ಈ ವರ್ಷದಿಂದ ಅನುಷ್ಠಾನಗೊಳಿಸಲಾಗಿದೆ ಎಂದರು.

ಮಾಹೆ ಸಹ ಕುಲಾಧಿಪತಿ ಡಾ.ಎಚ್.ಎಸ್.ಬಲ್ಲಾಳ್ ಮಾತನಾಡಿ, '21 ವರ್ಷಗಳಿಂದ ಸಾಮಾಜಿಕ ಕಾಳಜಿಯೊಂದಿಗೆ ರಿಯಾಯಿತಿ ದರದಲ್ಲಿ ಲಕ್ಷಾಂತರ ಜನರಿಗೆ ಗುಣಮಟ್ಟದ ಆರೋಗ್ಯ ಸೇವೆಗಳನ್ನು ಕೆಎಂಸಿ ಒದಗಿಸುತ್ತಿದೆ' ಎಂದರು.

ವೈದ್ಯಕೀಯ ಮತ್ತು ದಂತ ವಿಜ್ಞಾನಗಳ ಸಹ ಕುಲಪತಿ ಡಾ.ಪಿ.ಎಲ್.ಎನ್.ಜಿ.ರಾವ್ ಮತ್ತು ಮಾಹೆ ಮಂಗಳೂರು ಕ್ಯಾಂಪಸ್‌ನ ಸಹ ಉಪಕುಲಪತಿ ಡಾ.ದಿಲೀಪ್ ಜಿ.ನಾಯ್ಕ್, ಸಹ ಉಪ ಕುಲಪತಿ ಡಾ.ವೆಂಕಟರಾಯ ಎಂ. ಪ್ರಭು, ಕೆಎಂಸಿ ಡೀನ್ ಡಾ.ಶರತ್ ಕೆ.ರಾವ್, ಡಾ.ಬಿ.ಉನ್ನಿಕೃಷ್ಣನ್, ಕೃಷ್ಣ ಪ್ರಸಾದ್ ಇದ್ದರು.

ಕೆಎಂಸಿ, ನೆಟ್‌ವರ್ಕ್ ಆಸ್ಪತ್ರೆಗಳು, ಅಧಿಕೃತ ಪ್ರತಿನಿಧಿಗಳಲ್ಲಿ ಕಾರ್ಡ್ ಖರೀದಿಸಬಹುದು. ಹೆಚ್ಚಿನ ಮಾಹಿತಿಗೆ 9980854700/ 08202923748 ಸಂಪರ್ಕಿಸಬಹುದು.




2022ನೇ ಸಾಲಿನ ಮಣಿಪಾಲ್ ಆರೋಗ್ಯ ಕಾರ್ಡ್ ನೋಂದಣಿಗೆ ಶಾಸಕ ಕೆ.ರಘುಪತಿ ಭಟ್ ಶನಿವಾರ ಚಾಲನೆ ನೀಡಿದರು.

## ದರ ಎಷ್ಟು ?

ಮಣಿಪಾಲ ಆರೋಗ್ಯ ಕಾರ್ಡ್‌ನ ಒಂದು ವರ್ಷದ ಯೋಜನೆಯ ಲಾಭ ಪಡೆಯಲು ಒಬ್ಬರಿಗೆ ₹ 300, ಕೌಟುಂಬಿಕ ಕಾರ್ಡ್‌ಗೆ ₹ 600 (ಕಾರ್ಡ್‌ದಾರ, ಪತ್ನಿ, 25 ವರ್ಷದೊಳಗಿನ ಮಕ್ಕಳು), ಕುಟುಂಬ ಪ್ಲಸ್ ಯೋಜನೆಗೆ ₹ 750 (ಕಾರ್ಡುದಾರ, ಪತ್ನಿ, 25 ವರ್ಷದೊಳಗಿನ ಮಕ್ಕಳು ತಂದೆ, ತಾಯಿ, ಅತ್ತೆ, ಮಾವ), 2 ವರ್ಷದ ಯೋಜನೆಗೆ ಒಬ್ಬರಿಗೆ ₹ 500, ಕುಟುಂಬಕ್ಕೆ ₹ 800, ಕೌಟಂಬಿಕ ಪ್ಲಸ್ ಯೋಜನೆಗೆ ₹ 950 ಶುಲ್ಕ ಇರುತ್ತದೆ.

## ಮುಖ್ಯಾಂಶಗಳು

- ಒಂದು ವರ್ಷ, ಎರಡು ವರ್ಷದ ಅವಧಿಗೆ ಕಾರ್ಡ್ ಲಭ್ಯ
- 12ಕ್ಕೂ ಹೆಚ್ಚು ಜಿಲ್ಲೆಗಳ ರೋಗಿಗಳಿಗೆ ಪ್ರಯೋಜನ
- ಕಾರ್ಡ್‌ದಾರರಿಗೆ ಆಸ್ಪತ್ರೆಯ ಸೇವೆಗಳಲ್ಲಿ ರಿಯಾಯಿತಿ

## Other Links:

- Udupi News: https://wp.me/pbI6Ss-6GV
- Public Next: https://publicnext.com/article/nid/Udupi/Mangalore/Health-and-Fitness/node=659008
- The Canara Post: https://bit.ly/3thzoyZ
- Jana Prathinidhi: https://janaprathinidhi.com/?p=11607
- Udupi Times: https://udupitimes.com/udupi-times-9542/
- Daijiworld (Kannada): https://www.daijiworld.com/kannada/newsDisplay?newsID=63028&newsCategory=karvalli
- Daijiworld : https://www.daijiworld.com/news/newsDisplay?newsID=965506
- Mangalorean.com : https://bit.ly/3PUoJUy
- Udupi Xpress: https://udupixpress.com/registration-of-manipal-health-card-2022-was-flagged-off-by-raghupati-bhat/
- Namma Udupi Bulletin: https://nammaudupibulletin.com/suddigalu/pradeshika/reg-news-udupi-745/
- Karavali Xpress: https://karavalixpress.com/health/manipal-20/